ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

**ಅತಿ ಜರೂರು**

ದೂರವಾಣಿ: 080-22343904/05

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು-560001.

ಸಂಖ್ಯೆ: ಕಾಶಿಇ/ಶೈವಿ/50/ವಿಜ್ಞಾನ ಅನುದಾನ/2016-17

ದಿನಾಂಕ:21.01.2017.

# ಸುತ್ತೋಲೆ

ವಿಷಯ: ಪದವಿ ವಿಜ್ಞಾನ ಹಾಗೂ ಸ್ನಾತಕೋತ್ತರ ವಿಜ್ಞಾನ ಕೋರ್ಸುಗಳಿಗೆ ಬಿಡುಗಡೆ ಮಾಡಲಾಗಿರುವ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಬಗ್ಗೆ.

ಉಲ್ಲೇಖ: ದಿನಾಂಕ:27.09.2016 ಮತ್ತು 28.12.2016 ರ ಈ ಕಛೇರಿಯ ಅನುದಾನ ಬಿಡುಗಡೆ ಆದೇಶಗಳ ಸಂಖ್ಯೆ:ಕಾಶಿಇ/ಶೈವಿ/50/ವಿಜ್ಞಾನ ಅನುದಾನ/2016-17.

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2016-17ನೇ ಸಾಲಿನಲ್ಲಿ ವಿಜ್ಞಾನ ವಿಷಯಗಳಲ್ಲಿ ಪದವಿ ಹಾಗೂ ಸ್ನಾತಕೋತ್ತರ ಕೋರ್ಸುಗಳನ್ನು ಹೊಂದಿರುವ 163 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅವಶ್ಯವಿರುವ ಪ್ರಯೋಗಾಲಯ ಉಪಕರಣಗಳು ಮತ್ತು ರಾಸಾಯನಿಕ/ಕನ್ಸೂಮಬಲ್ಸ್‌ಗಳನ್ನು ಒದಗಿಸಿಕೊಳ್ಳಲು ಅಗತ್ಯವಿರುವ ಅನುದಾನವನ್ನು ಉಲ್ಲೇಖಿತ ಈ ಕಛೇರಿಯ ದಿನಾಂಕ:27.09.2016 ಮತ್ತು 28.12.2016 ರ ಈ ಕಛೇರಿಯ ಆದೇಶಗಳಲ್ಲಿ ಅನುದಾನವನ್ನು ಬಿಡುಗಡೆ ಮಾಡಿ, ಸದರಿ ಅನುದಾನವನ್ನು ನಿಯಮಾನುಸಾರ ಬಳಸಿಕೊಂಡು 'ಹಣ ಬಳಕೆಯ ಪ್ರಮಾಣ ಪತ್ರ'ವನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು.

ಆದರೆ, ಕೆಲವು ಕಾಲೇಜುಗಳ ಪ್ರಾಂಶುಪಾಲರು ಇಂದಿನವರೆಗೂ ಸದರಿ ಅನುದಾನವನ್ನು ಸಂಬಂಧಿಸಿದ ಉದ್ದೇಶಗಳಿಗೆ ಸಮರ್ಪಕವಾಗಿ ಬಳಸಿಕೊಳ್ಳದೇ ವಿಳಂಬ ಮಾಡುತ್ತಿರುವುದನ್ನು ಗಮನಿಸಲಾಗಿದೆ. ಆದುದರಿಂದ ಇದುವರೆವಿಗೂ ಅನುದಾನವನ್ನು ಬಳಸಿಕೊಳ್ಳದೇ ಇರುವ ಕಾಲೇಜುಗಳ ಪ್ರಾಂಶುಪಾಲರುಗಳು ಈ ಬಗ್ಗೆ ವೈಯಕ್ತಿಕ ಗಮನ ಹರಿಸಿ, ಬಿಡುಗಡೆಯಾದ ಅನುದಾನವು ವ್ಯಪಗತವಾಗದಂತೆ ನಿಯಮಾನುಸಾರ ಬಳಕೆಮಾಡಿಕೊಳ್ಳಲು ಕೂಡಲೇ ಕ್ರಮ ಕೈಗೊಳ್ಳುವಂತೆ ಹಾಗೂ ಸದರಿ ಅನುದಾನ ಬಳಕೆಯ ಬಗ್ಗೆ 'ಹಣ ಬಳಕೆಯ ಪ್ರಮಾಣ ಪತ್ರ'ವನ್ನು ಈ ಕಛೇರಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ. ತಪ್ಪಿದಲ್ಲಿ ಬಿಡುಗಡೆಯಾದ ಅನುದಾನವು ವ್ಯಪಗತವಾಗಲು ಕಾರಣರಾಗುವ ಪ್ರಾಂಶುಪಾಲರ ವಿರುದ್ಧ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಮುಂದುವರೆದು, ಈಗಾಗಲೇ ಅನುದಾನವನ್ನು ಬಳಸಿಕೊಂಡಿರುವ ಕಾಲೇಜುಗಳ ಪ್ರಾಂಶುಪಾಲರು 'ಹಣ ಬಳಕೆಯ ಪ್ರಮಾಣ ಪತ್ರ'ವನ್ನು ಕೂಡಲೇ ಈ ಕಛೇರಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,

**ಕಾಲೇಜು ಶಿಕ್ಷಣ ಜಂಟಿ ನಿರ್ದೇಶಕರು**

**ಪ್ರತಿ:**

1) ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಕಲಬುರಗಿ-***ಕೂಡಲೇ ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರಿಗೆ ಅಗತ್ಯ ನಿರ್ದೇಶನಗಳನ್ನು ನೀಡುವಂತೆ ಸೂಚಿಸಲಾಗಿದೆ.***
2) ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಮಾ.ತಂ.ವಿ. – ಸದರಿ ಪತ್ರವನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
3) ಕಛೇರಿ ಪ್ರತಿ.